94 ಶ್ರೀ ಜಾರ್ಜ್ ಕೆ.ಜೆ. (ಸರ್ವಜ್ಞ ನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಳೆ ನೀರು ಕಾಲುವೆ (SWD) (ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿನ) ಆಧುನೀಕರಣಕ್ಕಾಗಿ "(JNNURM)" ಜವಹರಲಾಲ್ ನೆಹರು ನ್ಯಾಷನಲ್ ಅರ್ಬನ್ ರಿನ್ಯೂವಲ್ ಮಿಷನ್ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆ ಆದ ಒಟ್ಟು ಹಣದ ಮೊತ್ತವೆಷ್ಟು;

ಆ) ಈ ಮೊತ್ತದಲ್ಲಿ ಹೆಬ್ಬಾಳ ವ್ಯಾಲಿಗಾಗಿ ಹಾಗೂ ಸರ್ವಜ್ಞ ನಗರ ಕ್ಷೇತ್ರಕ್ಕಾಗಿ ಎಷ್ಟು ಹಣವನ್ನು ಮೀಸಲಿಡಲಾಗಿದೆ (ವಿವರ ನೀಡುವುದು);

ಇ) ಯಾವ ಸಾಲಿನಲ್ಲಿ ಈ ಹಣದ ಬಿಡುಗಡೆ ಆಗಿದೆ;

ಈ) ಈ ಕೆಲಸಗಳನ್ನು ಕಾರ್ಯರೂಪಕ್ಕೆ ತರಲು ವಿಳಂಬಕ್ಕೆ ಕಾರಣಗಳೇನು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಜವಹರಲಾಲ್ ನೆಹರು ನ್ಯಾಷನಲ್ ಅರ್ಬನ್ ರಿನ್ಯೂವಲ್ ಮಿಷನ್ ಯೋಜನೆಯಡಿಯಲ್ಲಿ ಬೆಂಗಳೂರು ನಗರಕ್ಕೆ ರೂ.643.06 ಕೋಟಿಗಳ ಅಂದಾಜು ವೆಚ್ಚದ 4 ಯೋಜನೆಗಳಿಗೆ ಇದುವರೆಗೂ ರೂ. 132.51 ಕೋಟಿಗಳನ್ನು ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುತ್ತದೆ.

ಆ) ಹೆಬ್ಬಾಳ ವ್ಯಾಲಿಯ ಆಧುನೀಕರಣಕ್ಕಾಗಿ ರೂ. 184.74 ಕೋಟಿಗಳ ಅಂದಾಜು ವೆಚ್ಚದ ಮೊತ್ತದ ಕಾಮಗಾರಿಗಳಿಗೆ ಕೇಂದ್ರ ಸರ್ಕಾರವು ಈವರೆಗೆ ರೂ.32.33 ಕೋಟಿಗಳನ್ನು ಬಿಡುಗಡೆ ಮಾಡಿರುತ್ತದೆ. ಆದರೆ ಸರ್ವಜ್ಞ ನಗರ ಕ್ಷೇತ್ರಕ್ಕಾಗಿ ಪ್ರತ್ಯೇಕವಾಗಿ ಯಾವುದೇ ಹಣವನ್ನು ಮೀಸಲಿಡಲಾಗಿಲ್ಲ.

ಇ) ಈ ಕೆಳಕಂಡ ಸಾಲಿನಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ವಿವರಗಳು ಈ ಕೆಳಕಂಡಂತಿದೆ:

1. 2006–07 – ರೂ. 56.27 ಕೋಟಿಗಳು
2. 2007–08 – ರೂ. 56.27 ಕೋಟಿಗಳು
3. 2009–10 – ರೂ. 19.97 ಕೋಟಿಗಳು

ಒಟ್ಟು – ರೂ. 132.51 ಕೋಟಿಗಳು

ಈ) ಕೆಲಸಗಳನ್ನು ಕಾರ್ಯರೂಪಕ್ಕೆ ತರಲು ಜಾಗದ ಕೊರತೆ/ತಕರಾರು ಇರುವುದರಿಂದ ಈ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬವಾಗಿದೆ.